MR. SPEAKER.—I never assured you. I cannot assure you. Because somebody gives the motion I cannot stratghtaway assure you

SRI B. B. SAYANAK.—It is a most important think. When I have given a notice of motion to revoke the suspension of the members . ...

MR. SPEAKER.—Have you gone through the rules ?

SRI B. B. SAYANAK.—Yes. I have read that.

MR. SPEAKER.—I have to observe some rules. It is under my consideration, Whatever it may be, don't pass remarks on the Chair. I have to observe certain formalities. I cannot straightaway put the Motion for consideration of the House.

SRI B. B. SAYANAK —If that is the case, I have no alternative, but to stage a walk-out.

(*The hon. Member withdrew from the House*)

MR. SPEAKER.—It is left to you. When you stage a welk-out, don't press for these things.

Re. Notice of Privilege motion against Sri George Fernandes MP.

† ಶ್ರೀ ಹಾರನಹಳ್ಳಿ ರಾಮಸ್ವಾಮಿ (ಗಂಡಷಿ).—ಮಾನ್ಯ ಸಭಾಧ್ಯಕ್ಷರೇ, ೧೭೭-೧೭೮ನೆಯ ನಿಯಮಾವಳಿ ಪ್ರಕಾರ ಈ ಸಭೆಯ ನಡವಳಿಕೆಗಳಿಗೆ ಸಂಬಂಧಪಟ್ಟ ನಿಯಮಾವಳಿ ಪ್ರಕಾರ ಒಂದು ಸೂಚನೆಯನ್ನು ತಮ್ಮ ಅನುಮತಿಯನ್ನು ಕೋರಿ ತಮಗೆ ಕಳುಹಿಸಿಕೊಟ್ಟಿದ್ದೇನೆ. ಅದು ಈ ಸಭೆಯ ಹಕ್ಕುಭಾಧ್ಯತೆ ಮತ್ತು ಘನತೆ ಮತ್ತು ಗೌರವಗಳಿಗೆ ಸಂಬಂಧಪಟ್ಟಂತಾ ಪ್ರಶ್ನೆಯಾಗಿದೆ. ಅದನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತಾ ಇದ್ದೇನೆ. ನಾನು ಮತ್ತು ನನ್ನ ವಿಂತ್ರರೂ ಸೇರಿ ಈ ಸೂಚನೆಯನ್ನು ತಮಗೆ ಕಳುಹಿಸಿಕೊಟ್ಟಿದ್ದೇವೆ. ಮೊಟ್ಟ ಮೊದಲನೆಯದಾಗಿ ಈ ಸೂಚನೆ ಏನು ಅನ್ನುವುದನ್ನು ತಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಈ ಸೂಚನೆಯೊಂದಿಗೆ ಪತ್ರಿಕೆಯ ವರದಿಯನ್ನೂ ಕೂಡ ಲಗತ್ತಿಸಿದ್ದೇನೆ.

ಅಧ್ಯಕ್ಷರು.—ತಾವು ಆ ಬಗ್ಗೆ ಸೂಚನೆಯನ್ನು ಕಳುಹಿಸಿಕೊಟ್ಟಿದ್ದೀರಿ ಗೊತ್ತಿದೆ, ಅದರ ಜೊತೆಗೆ ಪತ್ರಿಕೆಯ ವರದಿಯನ್ನೂ ಕೂಡ ಲಗತ್ತಿಸಿದ್ದೀರಿ. ತಾವು ಕಳುಹಿಸಿಕೊಟ್ಟಿಂಥಾ ಆ ಸೂಚನೆಯನ್ನು ನಾನು ಸ್ವಲ್ಪ ಪರಿಶೀಲನೆ ಮಾಡಬೇಕಾಗುತ್ತದೆ ಎಂದು ಕಾಣುತ್ತದೆ. ಮಾನ್ಯ ಸದಸ್ಯರು ಅದರಲ್ಲಿ ಯಾರ ಹೆಸರನ್ನು ಪ್ರಸ್ತಾಪ ಮಾಡಿದ್ದಾರೆ ಅವರು ಈ ಮನೆಯ ಸದಸ್ಯರಲ್ಲ, ಅವರು ಲೋಕಸಭೆಯ ಸದಸ್ಯರು. ಈ ಸೂಚನೆಯನ್ನು ಹೇಗೆ ತೆಗೆದುಕೊಳ್ಳಬೇಕು, ಎನ್ನುವ ಬಗ್ಗೆ, ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕಿಂತ ಮುಂಚಿತವಾಗಿ ಸ್ವಲ್ಪ ತಿಳಿಸಿದರೆ ಉತ್ತಮ.

ಶ್ರೀ ಹಾರನಹಳ್ಳಿ ರಾಮಸ್ವಾಮಿ.—ನಾನು ಈ ಒಂದು ಸೂಚನೆಯನ್ನು ಓದುವುದಕ್ಕೆ ಮುಂಚಿತವಾಗಿ ಸೂಕ್ಷ್ಮವಾಗಿ ತಮಗೆ ಒಂದು ವಿಷಯವನ್ನು ತಿಳಿಸಬಯಸುತ್ತೇನೆ. ಅವರು ಈ ಮನೆಯ ಸದಸ್ಯರಲ್ಲ ಹೌದು, ಆದರೂ ಕೂಡ ಅವರು ಈ ಸಭೆಗೆ ಅಪಪ್ರಚಾರ ಮಾಡಿದ್ದಾರೆ, ಅದನ್ನು ಈ ಸಭೆಯಲ್ಲಿ ಹೇಗೆ ತೆಗೆದುಕೊಳ್ಳಬೇಕು ಎನ್ನುವುದರ ಬಗ್ಗೆ ಪ್ರಥಮತಃವಾಗಿ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಮೊದಲನೆಯದಾಗಿ ಹೇಳುವುದೇನೆಂದರೆ ೨೫-೬-೧೯೮೧ರ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಎರಡನೇ ಕಲಂನಲ್ಲಿ ಲೋಕಸಭಾ ಸದಸ್ಯರಾದ ಶ್ರೀ ಜಾಜ್ ಫರ್ನಾಂಡಿಸ್‌ರವರು ಹೇಳಿರುವ ಬಗ್ಗೆ